ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು.

ಶ್ರೀ ಎಂ. ರಘುಪತಿ (ವಿದ್ಯಾಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

ಅಧ್ಯಕ್ಷರು.—ಸಭೆಯ ಮುಂದೆ ಲಿಖಿತ ಉತ್ತರಗಳನ್ನು ಇಡಲಾಗಿದೆ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಂ. ರಘುಪತಿ (ವಿದ್ಯಾಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ವಾರ್ತಾ, ಯುವಜನ ಸೇವೆಗಳು, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಯವರ ಹೆಸರಿನಲ್ಲಿರುವ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1964ನೆಯ ಇಸವಿಯ ಕರ್ನಾಟಕ ಚಲನಚಿತ್ರ (ವಿಧಿನಿಯಮ) ಶಾಸನದ 22ನೆಯ ಕಲಂನ ಮೇರೆಗೆ ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯವರು ತಮ್ಮ ರಂಗಮಂದಿರದಲ್ಲಿ ಪ್ರದರ್ಶಿಸುವ 35 ಎಂ.ಎಂ. ಚಲನಚಿತ್ರ ಪ್ರದರ್ಶನಕ್ಕೆ ವಿನಾಯತಿ ನೀಡುವುದಕ್ಕೆ ಸಂಬಂಧಿಸಿದಂತೆ 1985ನೇ ಜುಲೈ 4ನೇ ದಿನಾಂಕದಂದು ಹೊರಡಿಸಿದ H.D.275 ಸಿ.ಎನ್.ಎ. 85ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುವುದು.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಮನವಿಗಳು

ವಿಷಯ : ಕುದುರೆಮೋತಿ ಮತ್ತು ತೆಲುಗು ಗಂಗಾ ಯೋಜನೆ ವಿಷಯಗಳನ್ನು ನಿಯಮ 68ರ ಪ್ರಕಾರ ಚರ್ಚೆಗೆ ತೆಗೆದುಕೊಳ್ಳುವುದರ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತೆಲುಗು-ಗಂಗಾ ಮತ್ತು ಕುದುರೆಮೋತಿ ವಿಚಾರಗಳಿಗೆ ಸಂಬಂಧಪಟ್ಟಂತೆ ನಾನು ತಮಗೆ ಎರಡು ವಿಷಯಗಳನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಕಳುಹಿಸಿಕೊಟ್ಟಿದ್ದೆ. ಆದರೆ ಅದನ್ನು ತಾವು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಿರುವುದಾಗಿ ತಿಳಿದುಬಂತು. ಇದನ್ನು ಪ್ರತ್ಯೇಕವಾಗಿ ಚರ್ಚೆಮಾಡಲು ತಾವು ಅವಕಾಶವನ್ನು ಕೊಡಬೇಕೆಂದು ನಾವು ಕೇಳಿದಾಗ ಅದಕ್ಕೆ ತಾವು ಒಪ್ಪಿಕೊಂಡಿದ್ದೀರಿ. ಅದರ ಪ್ರಕಾರ ನಾವು ತಮಗೆ ನೋಟೀಸ್ ಕೊಟ್ಟಿದ್ದೇವೆ.....

ಅಧ್ಯಕ್ಷರು.—ನಾಳೆ ಜನರಲ್ ಡಿಸ್ಕಷನ್ ಹೇಗೋ ಬರುತ್ತಿದೆ....

ಶ್ರೀ ಎಸ್. ಬಂಗಾರಪ್ಪ.—ಕುದುರೆಮೋತಿ ಪ್ರಕರಣದ ಚರ್ಚೆಯು ಮಹತ್ವ ಎಂಥಾದ್ದು ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ...

ಅಧ್ಯಕ್ಷರು.—ಈಗಾಗಲೇ ಇದೇ ವಿಚಾರದಲ್ಲಿ ಮಾನ್ಯ ಆರ್. ವೆಂಕಟರಾಮಯ್ಯನವರು, ಮಾನ್ಯ ಟಿ. ಎಸ್. ಮಣಿ ಅವರು ಹಾಗೂ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರೂ ಗಮನ ಸೆಳೆಯುವ ಸೂಚನೆಯಾಗಿ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ತಮ್ಮದನ್ನು ನಾನು ಗಮನ ಸೆಳೆಯುವ ಸೂಚನೆಯಾಗಿ ಕನ್‌ವರ್ಟ್ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಗಮನ ಸೆಳೆಯುವ ಸೂಚನೆಯಾಗಿ ಇದನ್ನು ಪರಿವರ್ತನೆ ಮಾಡಿದರೆ ಇದರ ವ್ಯಾಪ್ತಿ ಏನು ? ಇದರಲ್ಲಿ ಎಷ್ಟು ಚರ್ಚೆಮಾಡಬಹುದು ? ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ....

ಅಧ್ಯಕ್ಷರು.—ನೀವು ಹೇಳಿದ ವಿಚಾರವನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಈ ವಿಷಯವನ್ನು ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಂಡರೆ, ಅದಕ್ಕೆ ಯಾರು ಯಾರು ಸದಸ್ಯರು ಸಹಿ ಹಾಕಿರುತ್ತಾರೆ ಅವರು ಮಾತ್ರ ಚರ್ಚೆಯಲ್ಲಿ ಭಾಗವಹಿಸಲು ಸಾಧ್ಯವಿದೆ, ಅಲ್ಲದೆ ಅದರಲ್ಲಿ ಹೆಚ್ಚಿನ ರೀತಿಯಲ್ಲಿ ಚರ್ಚೆಯನ್ನೂ ಕೂಡ ಮಾಡಲು ಬರುವುದಿಲ್ಲ. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆದಿರುವುದರಿಂದ ಈ ಅನ್ಯಾಯವನ್ನು ಸಹಿಸಿಕೊಂಡು ನಾವು ಇಲ್ಲಿ ಸುಮ್ಮನೆ ಕೂತುಕೊಳ್ಳುವುದಕ್ಕಾಗುವುದಿಲ್ಲ. ಅದೇರೀತಿ ತೆಲುಗು-ಗಂಗಾ ವಿಚಾರದಲ್ಲೂ ಆಯ್ತು....

ಅಧ್ಯಕ್ಷರು.—ತಮ್ಮ ವಿಷಯವನ್ನು ಸ್ಪೆಷಲ್ ಕೇಸ್ ಆಗಿ ಪರಿಗಣಿಸಿ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರೂ, ಟಿ. ಎಸ್. ಮಣಿಯವರೂ ಮತ್ತು ಇನ್ನೂ ಬೇರೆಯವರೂ ಆ ಚರ್ಚೆಯಲ್ಲಿ ಭಾಗವಹಿಸಲಿ. ಅದಕ್ಕೆ ನನ್ನ ಆಭ್ಯಂತರ ವಿಲ್ಲ.

ಅಧ್ಯಕ್ಷರು.—ನೀವು ನಿಯಮ 68ರ ಪ್ರಕಾರ ನೋಟೀಸ್ ಕಳುಹಿಸಿಕೊಟ್ಟಿದ್ದೀರಿ.
Rules 68 is as follows :

"Any member desirous of raising discussion on a matter of urgent public importance may give notice in writing to the Secretary specifying clearly and precisely the matter to be raised :

Provided that the notice shall be accompanied by an explanatory note stating reasons for raising a discussion on the matter in question :
Provided further that the notice shall be supported by signatures of at least two other members"
Rules 69 says :

"If the Speaker is satisfied, after calling for such information from the member who had given notice and from the Minister as he may consider necessary, that the matter is urgent and is of sufficient importance to be raised in the House at an early date, he may admit the notice :
Provided that if an early opportunity is otherwise available for the discussion of the matter the Speaker may refuse to admit the notice."

ಈ ನಿಯಮದ ಪ್ರಕಾರ ನನಗೆ ಎರಡು ವಿಧವಾದ ಅಧಿಕಾರ ಇದೆ. ಬೆ ಕಾದರೆ ಇದನ್ನು ನಾನು ರಿಜೆಕ್ಟ್ ಮಾಡಬಹುದು. ಆದರೆ ಆ ರೀತಿ ರಿಜೆಕ್ಟ್ ಮಾಡದೆ ನಿಮಗೆ ಡಿಸ್ಕಷನ್‌ಗೆ ಅವಕಾಶವನ್ನು ಕಲ್ಪಿಸಿ ಕೊಡುತ್ತೇನೆ.

ಶ್ರೀ ಧರ್ಮಸಿಂಗ್.—ಸ್ವಾಮಿ, ನಾನೂ ಕೂಡ ಒಂದು ನೋಟೀಸ್‌ನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಈಗಾಗಲೇ ಹೇಳಿದಂತೆ ನನಗೆ ಎರಡು ರೀತಿಯ ಅಧಿಕಾರ ಇದೆ. ತಾವು ನೋಟೀಸ್ ಕಳುಹಿಸಿಕೊಟ್ಟಿದ್ದೀರಿ. ಇವೊತ್ತು ಸಂಜೆಯೊಳಗಾಗಿ ನಿಯಮ 68ರ ಪ್ರಕಾರ ಡಿಸ್ಕಷನ್‌ಗೆ ಅವಕಾಶ ಮಾಡಿಕೊಡುತ್ತೇನೆ. ಮೊದಲು ಗಮನ ಸೆಳೆಯುವ ಸೂಚನೆ ಮುಗಿಯಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ಗಮನ ಸೆಳೆಯುವ ಸೂಚನೆ ನಿನ್ನೆಯ ದಿವಸ ಕೂಡ ಬಂದಿತ್ತು ; ಇವತ್ತೂ ಬಂದಿದೆ. ಮಾನ್ಯ ಮಂತ್ರಿಯವರು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಗಮನ ಸೆಳೆಯುವ ಸೂಚನೆ ಮುಗಿದಮೇಲೆ ನಿಯಮ 68ರ ಪ್ರಕಾರ ಕೊಟ್ಟಿರತಕ್ಕಂಥ ನೋಟೀಸಿಗೆ ತಾವು ಅವಕಾಶ ಮಾಡಿಕೊಡುತ್ತೀರಿ. ರೂಲ್ಸ್ 68ರ ಪ್ರಕಾರ ಅವರು ಕೊಟ್ಟಿರತಕ್ಕಂಥ ನೋಟೀಸ್ ಮೇರೆಗೆ ಚರ್ಚೆಗೆ ಅವಕಾಶ ಮಾಡಿಕೊಡಬಹುದು. ಆದರೆ ಅದಕ್ಕೂ ಮೊದಲು ಒಬ್ಬ ಸದಸ್ಯರು ಗಮನ ಸೆಳೆಯುವ ಸೂಚನೆಯನ್ನು ಕೇಳುತ್ತಾರೆ. ಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತಾರೆ. ಆನಂತರ ನಿಮಗೂ ಎಂದರೆ ವಿರೋಧಪಕ್ಷದ ಕಡೆ ಕುಳಿತಿರತಕ್ಕಂಥ ಸದಸ್ಯರಿಗೂ ಚರ್ಚೆ ಅವಕಾಶ ಮಾಡುತ್ತಾರೆ.

ಅಧ್ಯಕ್ಷರು.—ಅವರು ತಮ್ಮ ಹಕ್ಕನ್ನು ಎತ್ತಿ ಹೇಳಿದ್ದಾರೆ. ನಾನು ತಮಗೂ ಹೇಳಿದ್ದೇನೆ. ತಮಗೆ ಡಿಸ್‌ಕಷನ್‌ಗೆ ಅಲೋ ಮಾಡುತ್ತೇನೆ.

ಶ್ರೀ ಕೆ ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ತಮಗೆ ಸದಸ್ಯರ ಹಕ್ಕನ್ನು ಮೊಟಕು ಮಾಡುವಂಥ ಅಧಿಕಾರವಿಲ್ಲ. ಸದಸ್ಯರಿಗೆ ನಾನಾ ರೀತಿಯ ಹಕ್ಕು ಇರುತ್ತದೆ. ಅದನ್ನು ಅವರು ಚಲಾಯಿಸುತ್ತಾರೆ, ನಾನೂ ಒಪ್ಪುತ್ತೇನೆ. ಯಾವುದೇ ವಿಷಯ ಮಹತ್ವದ್ದು ಇದ್ದು, ಅದು ಸರಿಯಾದ ರೀತಿಯಲ್ಲಿ ಚರ್ಚೆಯಾಗಬೇಕು ಎನ್ನುವ ವಿಚಾರ ಇರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಅದು ಮಹತ್ವದ್ದು ಇದ್ದರೆ ಅದರ ಬಗ್ಗೆ ಸರಿಯಾದ ರೀತಿಯಲ್ಲಿ ಸದನದಲ್ಲಿ ಚರ್ಚೆಯಾಗಬೇಕು. ಅದು ಇಡೀ

ಸದನಕ್ಕೆ ಸೇರತಕ್ಕಂಥ ಹಕ್ಕು, ಅದನ್ನು ಮೊಟಕು ಮಾಡುವಂಥ ರೀತಿಯಲ್ಲಿ ಆಗಬಾರದೆಂದು ನನ್ನ ಇಚ್ಛೆ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೊಂದು ಕ್ರಿಯಾಲೋಪ, ನಾವೂ ಕೂಡ ಕುದುರೆಮೋತಿ ಮತ್ತು ತೆಲುಗುಗಂಗಾ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ನೋಟೀಸ್ ಕಳುಹಿಸಿಕೊಟ್ಟಿದ್ದೆವು. ಅದನ್ನು ಬದಲಾವಣೆ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಅವಶ್ಯಕತೆ ಏನೂ ಕಂಡುಬರುವುದಿಲ್ಲ. ಈಗ ನೀವು ಅದನ್ನು ಕನ್‌ವರ್ಟ್ ಮಾಡಿ ಎಂದರೆ ಏನು ಅರ್ಥ. ರೂಲ್. ನಂ. 58(1) ನೋಡಿ, ಅದರಲ್ಲಿ ಏನು ಹೇಳಿದೆ ಎಂದರೆ ಪ್ರಶ್ನೆಗಳು ಹಾಕಿ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರದೆ ಹೋದಪಕ್ಷದಲ್ಲಿ ಅದನ್ನು ಕನ್‌ವರ್ಟ್‌ಮಾಡಿ ಅರ್ಧಗಂಟೆ ಚರ್ಚೆಗೆ ಇಟ್ಟುಕೊಳ್ಳಬಹುದು ಎಂದು ಇದೆ. ಈ ರೂಲ್ 58(1) ರೂಲ್ 72ಕ್ಕೂ ವ್ಯತ್ಯಾಸ ಇದೆ. ಆದ್ದರಿಂದ ಇದರ ಬಗ್ಗೆ ಕಾಲ್ ಅಟೆನ್‌ಷನ್ ಮೋಷನ್‌ಗೆ ಅವಕಾಶ ಮಾಡಿಕೊಟ್ಟರೆ ತಪ್ಪಾಗುವುದಿಲ್ಲವೆ ? ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಚರ್ಚೆಗೆ ಎರಡು ವಿಷಯಗಳನ್ನ ಎಂದರೆ ಕುದುರೇಮೋತಿ ವಿಷಯ ಹಾಗೂ ತೆಲುಗು ಗಂಗಾ ಬಗ್ಗೆ ಚರ್ಚೆಗೆ ಇಟ್ಟುಕೊಳ್ಳಬೇಕೆನ್ನುವುದು ನನ್ನ ಅಭಿಪ್ರಾಯ.

ಶ್ರೀ ಧರ್ಮಸಿಂಗ್.—ಶ್ರೀಮತಿ ಲೀಲಾವತಿ ಆರ್. ಪ್ರಸಾದ್‌ರವರು ಕುದುರೇಮೋತಿ ಪ್ರಕರಣದ ಬಗ್ಗೆ ನಿಯಮ 72ರ ಪ್ರಕಾರ ಕಾಲಿಂಗ್ ಅಟೆನ್‌ಷನ್ ಕಳುಹಿಸಿಕೊಟ್ಟಿದ್ದಾರೆ. ಯಲಬುರ್ಗ ತಾಲ್ಲೂಕಿನ ಕುದುರೇಮೋತಿಯಲ್ಲಿ ನಡೆದಂಥ ಘಟನೆ ಇಡೀ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ನಡೆದಂಥ ಘಟನೆ ಯಾಗಿರುತ್ತದೆ. ಇದರ ಬಗ್ಗೆ ಚರ್ಚೆಯಾಗಬೇಕು. ನಿಲುವಳಿ ಸೂಚನೆಯನ್ನು ನಾವು ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ಆದರೆ ಈ ಘಟನೆಯ ಹಿನ್ನೆಲೆಯಲ್ಲಿ ಏನು ನಡೆದಿದೆ ಅದನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಸರ್ಕಾರ ಯಾವ ರೀತಿ ಕಣ್ಣುಮುಚ್ಚಿಕೊಂಡು ಕುಳಿತಿದೆ ಎಂದು ಆಕ್ಷೇಪಿಸಿ ಉತ್ತರ ಕೇಳಬೇಕಾಗಿದೆ. ನಾವು ಇವತ್ತು ಯಾವುದೇ ಸದಸ್ಯರ ಹಕ್ಕನ್ನು ಮೊಟಕು ಮಾಡಬೇಕೆಂದು ಕೇಳುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ ಕಾಲ್ ಅಟೆನ್‌ಷನ್ ಕೇಳುವುದು ಆ ಸದಸ್ಯರ ಹಕ್ಕು. ಅವರ ಹಕ್ಕಿನ ಪ್ರಕಾರ ಅವರು ಕ್ಲಾರಿಫಿಕೇಷನ್ ಕೇಳುತ್ತಾರೆ. ಅವರು ಕ್ಲಾರಿಫಿಕೇಷನ್ ಕೇಳಲಿ.

ಶ್ರೀ ಧರ್ಮಸಿಂಗ್.—ಸದನದಲ್ಲಿ ಒಂದೆ ವಿಷಯ ಬಂದಾಗ ಅದಕ್ಕೆ ಸರ್ಕಾರವು ಉತ್ತರ ಸೀಮಿತ ವಾಗಿರುತ್ತದೆ. ಹೆಣ್ಣು ಮಕ್ಕಳಿಗೆ ರಾಜ್ಯದಲ್ಲಿ ಈ ರೀತಿ ಘಟನೆಗಳು ನಡೆಯುತ್ತಿರಬೇಕಾದರೆ, ನಾವು ಕೂಡ ಇದರ ಹಿನ್ನೆಲೆ ಏನು ಎಂಬುದನ್ನು ಹೇಳಬೇಕಾಗುತ್ತದೆ. ಅಧ್ಯಕ್ಷರೇ ಈವತ್ತು ಇದು ಒಂದು ಮಹತ್ವವಾದ ವಿಚಾರವಾಗಿರುವುದರಿಂದ ಜನರ ಮನಸ್ಸಿನಲ್ಲಿ ಏನು ಇದೆ ಎಂದರೆ ಈ ವಿಷಯದ ಬಗ್ಗೆ ಸದನದಲ್ಲಿ ಚರ್ಚೆಯಾಗುತ್ತದೆಂದು ನಿರೀಕ್ಷಣೆ ಮಾಡುತ್ತಿದ್ದಾರೆ. ಆದ್ದರಿಂದ ನಿಯಮದ ಪ್ರಕಾರ ಕೇಳುತ್ತಿದ್ದೇವೆ. ತಾವು ಸದಸ್ಯರ ಹಕ್ಕನ್ನು ರಕ್ಷಣೆ ಮಾಡದೆಹೋದರೆ ಬೇರೆ ಯಾರನ್ನು ಕೇಳಬೇಕು ತಾವೇ ಹೇಳಿ ? ನಿಜವಾಗಿಯೂ ಸರ್ಕಾರ ಉತ್ತರ ಕೊಡಬೇಕೆನ್ನತಕ್ಕಂಥ ಅಪೇಕ್ಷೆ ಇದ್ದರೆ ಇದರ ಬಗ್ಗೆ ಹೆಚ್ಚಿನ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು. ನಮ್ಮ ರಕ್ಷಣೆಗೆ ನೀವು ಬರಬೇಕು ನೀವು ನಮ್ಮ ರಕ್ಷಣೆಗೆ ಬಾರದಿದ್ದರೆ ತೊಂದರೆಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸದಸ್ಯಣಿಯರಾದ ಲೀಲಾವತಿ ಆರ್. ಪ್ರಸಾದ್‌ರವರು ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಪ್ರಶ್ನೆ ಇಷ್ಟೇ. ಈ ಸದನದಲ್ಲಿ ತಾವು ಬಹಳ ಅನುಭವಿಗಳು ಮತ್ತೆ ಮಾಜಿ ವಿಧಾನ ಸಭಾ ಸದಸ್ಯಣಿಯವರು ಇದ್ದಾರೆ. ನನಗೆ ತಿಳಿದಿರುವ ಪ್ರಕಾರ ಇಂಥ ಒಂದು ಘಹನವಾದ ವಿಚಾರ ಬಂದಾಗ ಅದಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾಗುತ್ತದೆಂದು ನಾವು ತಿಳಿದುಕೊಂಡಿರುತ್ತೇವೆ. ಕುದುರೆಮೋತಿ ಪ್ರಕರಣದ ಬಗ್ಗೆ ಮಾನ್ಯ ಕೃಷ್ಣನ್‌ರವರೂ ಕೂಡ ಒಂದು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕೊಟ್ಟಿದ್ದಾರೆ. ಅದೇ ಪ್ರಕಾರ ತೆಲುಗು-ಗಂಗಾ ಯೋಜನೆಯ ಬಗ್ಗೆಯೂ ನಾವು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕಳುಹಿಸಿಕೊಟ್ಟಿದ್ದೇವೆ. ಈ ಸದನದಲ್ಲಿ ಸಂಪ್ರದಾಯ ನಾನು ತಿಳಿದುಕೊಂಡ ಪ್ರಕಾರ ನಿನ್ನೆಯೇ ಈ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ನಿನ್ನೆ ಒಂದು ಪ್ರಮುಖ ವಾದ ವಿಚಾರ ಚರ್ಚೆಗೆ ಬಂದುದರಿಂದ ನಾವು ನಿನ್ನೆ ಇದನ್ನು ಪ್ರೆಸ್ ಮಾಡಲಿಲ್ಲ. ಏತಕ್ಕೆಂದರೆ ಇದಕ್ಕಿಂತ ಮುಖ್ಯವಾದ ಬರಗಾಲ ವಿಚಾರ ಬಹಳ ಪ್ರಮುಖವಾದ ವಿಚಾರವಾಗಿತ್ತು. ಆದ್ದರಿಂದ ಇವತ್ತು ಈ ಅಡ್ಜರ್ನ್‌ಮೆಂಟ್ ಮೋಷನ್ ಎತ್ತುವುದು ಸರಿಯಲ್ಲ. ಸದನದ ಕಾರ್ಯಕಲಾಪಗಳು ನಮೂದಿ ಸಿರುವಂತೆ ಆಗಬೇಕೆಂದು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ 19ನೇ ತಾರೀಖು ಕೊಟ್ಟಿದ್ದರೂ

ಅದು ಅಷ್ಟು ಮಹತ್ವವಾದ ವಿಚಾರವಲ್ಲವೆಂದು ತಿಳಿದು ಆ ವಿಚಾರವನ್ನು ಎತ್ತಲಿಲ್ಲವೇ ಹೊರತು ಅದು ಕಾಲಿಂಗ್ ಅಟೆಂಷನ್ ಮೂಲಕ ತೆಗೆದುಕೊಳ್ಳುತ್ತಾರೆಂದು ತಿಳಿದುಕೊಂಡಿರಲಿಲ್ಲ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಅಷ್ಟು ಮಹತ್ವವಾದ ವಿಚಾರವಲ್ಲವೆಂದು ತಮ್ಮ ಅಭಿಪ್ರಾಯವೇ ?

ಶ್ರೀ ಎಂ. ವೀರಪ್ಪ ಮೊಯಿಲಿ—ಅಷ್ಟು ಪ್ರಮುಖವಾದ ವಿಚಾರವಾದ್ದರಿಂದಲೇ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿರುವುದು. ಅಡ್ಜರ್ನ್‌ಮೆಂಟ್ ಮೋಷನ್ ಎಂದರೆ 2ನೇ ಹಂತ, ಕಾಲಿಂಗ್ ಅಟೆಂಷನ್ ಎಂದರೆ ಅದು ಮೂರನೆ ಹಂತ. ನಾವು ಈ ವಿಚಾರದ ಬಗ್ಗೆ 19ನೇ ತಾರೀಖು ಅಡ್ಜರ್ನ್‌ಮೆಂಟ್ ನೋಟೀಸ್ ಮೋಷನ್ ಮೂವ್ ಮಾಡಿದ್ದೆವು. ಇವೊತ್ತು ಅದೇ ವಿಚಾರವನ್ನು ಕಾಲಿಂಗ್ ಅಟೆಂಷನ್ ಮುಖಾಂತರ ತೆಗೆದುಕೊಳ್ಳುವುದಾದರೆ ನಮ್ಮಗಳಿಲ್ಲರ ಹೆಸರೂ ಕೂಡ ಅದರಲ್ಲಿ ಬರಬೇಕಾಗಿತ್ತು, ಇದು ಸಂಪ್ರದಾಯ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಆಲೋ ಮಾಡಬೇಕೆಂದು ಕೇಳುವುದು ಎಲ್ಲರ ಹಕ್ಕು. ಅನೇಕ ಮಾನ್ಯ ಸದಸ್ಯರು ಆ ಹಕ್ಕನ್ನು ಚಲಾಯಿಸಬೇಕೆಂದು ತಮ್ಮನ್ನು ಕೇಳುತ್ತಿದ್ದಾರೆ. ಹಾಗೂ ಎಲ್ಲರೂ ಆ ಫಾರಂನಲ್ಲಿಯೇ ಕೊಟ್ಟಿದ್ದಾರೆಯೇ ? The right course would have been to include the names of all persons who have given the notice of adjournment motion in the calling attention motion. ಆದ್ದರಿಂದ ಮೂಲ ಭೂತವಾಗಿ ಇಲ್ಲಿ ಸ್ವಲ್ಪ ಪರಂಪರೆಯನ್ನು ಬಿಟ್ಟು ಹೋಗಿದ್ದೇವೆ ಎಂಬ ಅನುಮಾನದಿಂದ ಹೇಳುತ್ತಿದ್ದೇನೆ. ವಿಷಯ ಬಹಳ ಮಹತ್ವದ್ದಾಗಿದೆ. ನಾನು ತಮಗೆ ಸೂಕ್ಷ್ಮವಾಗಿ ಹೇಳುತ್ತೇನೆ ಏನೆಂದರೆ. ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟಿರುವಾಗ ಅದನ್ನು ಬದಿಗೊತ್ತಿ ಗಮನ ಸೆಳೆಯುವ ಸೂಚನೆಯನ್ನೇ ತೆಗೆದುಕೊಳ್ಳುವುದಾದರೆ ಇಡೀ ಸದನದ ಎಲ್ಲಾ ಸದಸ್ಯರ ಹಕ್ಕುಚ್ಯುತಿ ಆಗುವುದಿಲ್ಲವೇ ? ಏಕೆಂದರೆ ಇವೊತ್ತು ಇಂತಹ ಸತ್ಸಂಪ್ರದಾಯವನ್ನು ಹಾಕಿದರೆ ಮುಂದೆ ಕೂಡ ನಾವು ಎಡವುತ್ತೇವೆ. ದಯಮಾಡಿ ಸಾಧ್ಯವಾದರೆ, ಗಮನ ಸೆಳೆಯುವ ಸೂಚನೆಗೆ ಎಲ್ಲರ ಹೆಸರುಗಳನ್ನು ನಮೂದು ಮಾಡಿ ಪ್ರಶ್ನೆ ಕೇಳುವಂತಾದರೆ ಸರಿ. ಇನ್ನೊಂದು ಅಂಶ ಎಂದರೆ, ಗಮನ ಸೆಳೆಯುವ ಸೂಚನೆಯಲ್ಲಿ ಬರೀ ಪ್ರಶ್ನೆಯನ್ನು ಹಾಕಬಹುದು. ಅದೂ ಕೂಡ ಮೊದಲು ಯಾರ ಹೆಸರು ಬರುತ್ತದೆಯೋ ಅವರು ಮಾತ್ರ ಪ್ರಶ್ನೆ ಕೇಳಬಹುದು, ಎರಡನೆಯ ಹೆಸರಿನವರಿಗೆ ಅವಕಾಶ ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ. ಈ ತೆಲುಗು-ಗಂಗಾ ಪ್ರಾಜೆಕ್ಟ್ ಇಡೀ ದೇಶದಲ್ಲಿಯೇ ಹಾಹಾಕಾರವನ್ನು ಎಬ್ಬಿಸಿದೆ. ಮೇಲ್ಮನೆಯಲ್ಲಿ ನಾಲ್ಕು ಗಂಟೆಗಳ ಕಾಲ ಚರ್ಚೆ ಆಗಿದೆ. ಅದನ್ನು ಲೆಕ್ಕ ಹಾಕಿದರೆ ಈ ಮನೆಯಲ್ಲಿ ಒಂದು ವಾರವಾದರೂ ಚರ್ಚೆಯಾಗಬೇಕು. ಆದ್ದರಿಂದ ಇವೊತ್ತು ಈ ಮಹತ್ವವಾದ ವಿಷಯವನ್ನು ಗಮನ ಸೆಳೆಯುವ ಸೂಚನೆಯಲ್ಲಿ ಸೀಮಿತವಾಗಿ ಮುಗಿಸಿಬಿಡುತ್ತೇವೆ ಎಂದರೆ ಅದು ಕೂಡ ಸರಿಯಲ್ಲ. ಇದರಿಂದ ವಿಷಯದ ಗಂಭೀರತೆ ಸಂಪೂರ್ಣವಾಗಿ ನಾಶವಾಗುತ್ತದೆ. ಅದಕ್ಕೆ ತಾವು ದಯಮಾಡಿ ಅವಕಾಶ ಕೊಡಬೇಡಿ. ಇದನ್ನು ಬರೀ ಉತ್ತರ ಮತ್ತು ಪ್ರಶ್ನೆ ಎಂದು ಡಿಸ್‌ಪೋಸ್ ಮಾಡಿ ಮುಗಿಸಲಿಕ್ಕೆ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ಸಲಹೆಯನ್ನು ಕೊಟ್ಟಿದ್ದಾರೆ. ಏನೆಂದರೆ ಗಮನ ಸೆಳೆಯುವ ಸೂಚನೆಗೆ ಮೊದಲು ಉತ್ತರ ಕೊಡಲಿ ನಂತರ ಬೇಕಾದರೆ ಚರ್ಚೆಗೆ ಅವಕಾಶ ಕೊಡಬಹುದು ಎಂದು....

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ, ನೀವು ಹೇಳುವುದನ್ನು ಅವರು ಕೇಳಬೇಕು. ಅವರು ಹೇಳುವುದನ್ನೂ ಕೂಡ ನೀವು ಕೇಳಬಾರದೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ಈ ಗಮನ ಸೆಳೆಯುವ ಸೂಚನೆಯನ್ನು ಇವೊತ್ತು ತೆಗೆದುಕೊಳ್ಳಬಹುದು ಎಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳಿದ್ದಲ್ಲ, ಅದು ಅಧ್ಯಕ್ಷರು ಹೇಳಿದ್ದು. ನಾನು ಹೇಳಿದೇ ಇದ್ದುದನ್ನು ಸೇರಿಸುವುದಕ್ಕೆ ಹೋಗುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.— ನೀವು ಕೂಡ ಆಗಬಹುದು ಎಂದು ಹೇಳಿದ್ದೀರಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗಮನ ಸೆಳೆಯುವ ಸೂಚನೆಯಲ್ಲಿ ಯಾರು ಅದನ್ನು ಕಳುಹಿಸಿರುತ್ತಾರೆ ಅವರು ಮಾತ್ರ ಪ್ರಶ್ನೆಹಾಕಿ, ಅದಕ್ಕೆ ಉತ್ತರ ಕೊಟ್ಟು ಇದನ್ನು ನಿಲ್ಲಿಸಬೇಕಾಗುತ್ತದೆ. ಈ ಪ್ರಶ್ನೆಗೆ ಅಷ್ಟು ಮಹತ್ವ ಇದೆ. ಏನು ಹೆಣ್ಣು ಮಕ್ಕಳು ಎಂದರೆ ಸಾಧಾರಣವಾದ ಆಟಿಕೆ ವಸ್ತುಗಳಾಗಿ ಬಿಟ್ಟರೇನು ? ಈ ವಿಚಾರ ಮಾತನಾಡುವುದೂ ಬೇಡವೆ ? ಅವರು ಕೇಳಿಬಿಟ್ಟರು, ಇವರು ಹೇಳಿಬಿಟ್ಟರು

ಎಂದರೆ ಮುಗಿದುಹೋಯಿತೆ ? ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿರುವುದನ್ನು ಬದಿಗೊತ್ತಿ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬಹುದೇ ?**

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಪೇಪರ್‌ನಲ್ಲಿ ಹೆಸರು ಬರಬೇಕೆಂದು ಅಪೇಕ್ಷೆ ಯಾರಿಗೂ ಇಲ್ಲ. ಈ ವಿಷಯದಲ್ಲಿ ಎಲ್ಲರಿಗೂ ಕಳಕಳಿ ಇದೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಪತ್ರಿಕೆಯಲ್ಲಿ ಹೆಸರು ಬರಲಿ ಎಂದು ಹೇಳಿರುವುದು ಸರಿಯಲ್ಲ....

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ನನಗೆ ನೀವು ರಕ್ಷಣೆ ಕೊಡಬೇಕು. ನಾನು ಇಲ್ಲಿ ಮಾತನಾಡುತ್ತಿದ್ದೇನೆ....

ಅಧ್ಯಕ್ಷರು.—ತಾವು ಸ್ವಲ್ಪ ಇಲ್ಲಿ ಕೇಳಿ. ತಮ್ಮ ಬಗ್ಗೆ ನನಗೆ ಬಹಳಷ್ಟು ಅಭಿಮಾನ ಇದೆ. ತಾವು ಹಿಂದೆ ಇಲ್ಲಿ ಸ್ಪೀಕರ್ ಆಗಿದ್ದಂಥ ಸಮಯದಲ್ಲಿ ಮ್ಯಾಕ್ಸಿಮಮ್ ಪ್ರಶ್ನೆಗಳನ್ನು ಹಾಕಿ ಟ್ರೈನಿಂಗ್ ತೆಗೆದು ಕೊಂಡವನು ನಾನು. ತಮ್ಮ ಹೆಸರು ಪೇಪರ್‌ನಲ್ಲಿ ಬರಬೇಕು ಎನ್ನುವ ಇಚ್ಛೆ ಈ ಕಡೆಯ ಸದಸ್ಯರಿಗೂ ಇಲ್ಲ, ಆ ಕಡೆಯ ಸದಸ್ಯರಿಗೂ ಇಲ್ಲ. ಮಹತ್ವವಾದ ವಿಷಯವೇನೇ ಇದ್ದರೂ ಪತ್ರಿಕೆಯವರು ಹೆಸರು ಹಾಕಿಯೇ ಹಾಕುತ್ತಾರೆ. ಪೇಪರ್‌ನಲ್ಲಿ ಹೆಸರು ಬರುವ ದೃಷ್ಟಿಯಿಂದ ಎಂದು ತಾವು ಹೇಳಿರುವುದು ಸರಿಯಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಪೇಪರ್‌ನಲ್ಲಿ ಬರಲಿ ಎಂದು ಹೇಳಿಲ್ಲ. ದಾಖಲೆ ತೆಗೆದು ತಾವು ನೋಡಬಹುದು.

ಅಧ್ಯಕ್ಷರು.—ಪೇಪರ್‌ನಲ್ಲಿ ಬರಲಿ ಎಂದು ತಾವು ಹೇಳಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಹಾಗೆ ಹೇಳಿಲ್ಲ.

ಅಧ್ಯಕ್ಷರು.—ಒಂದು ಸಲಹೆಯನ್ನು ತಾವು ಕೊಡಬಹುದಲ್ಲ. ಎಲ್ಲರಿಗೂ ಮಾತನಾಡಲಿಕ್ಕೆ ಅವ ಕಾಶವನ್ನು ಕೊಡಿ, ವಿಷಯ ಬಹಳ ಗಂಭೀರವಾದದ್ದು ಇದೆ ಎಂದು ಹೇಳಿ. ನಿಲುವಳಿ ಸೂಚನೆಗೆ ನೋಟೀಸ್‌ನ್ನು ಇವೊತ್ತು ಕೊಟ್ಟಿದ್ದಾರೆ. ನಿಮ್ಮ ಅಭಿಪ್ರಾಯದಲ್ಲಿ ಇದು ಬೇಡವೆನ್ನುವುದಾದರೆ, ಗಮನ ಸೆಳೆಯುವ ಸೂಚನೆ ಬೇಡ, ನಾಳೆಯ ದಿವಸ ಚರ್ಚೆಯನ್ನೇ ಬೇಕಾದರೆ ಇಟ್ಟುಕೊಳ್ಳೋಣ ಎಂದು ಬೇಕಾದರೆ ಸಲಹೆಯನ್ನು ಕೊಡಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗಮನ ಸೆಳೆಯುವ ಸೂಚನೆಯಲ್ಲಷ್ಟೇ ಹೇಳಿಬಿಡುವ ವಿಚಾ ರವೇ ಇದು ?

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ ....

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ, ಎರಡನೆಯ ಸಲ ಮಾತನಾಡುವುದಕ್ಕೆ ನಾನು ಅವ ಕಾಶ ಕೊಡುವುದಿಲ್ಲ. ನೀವು ಈಗಾಗಲೇ ಮಾತನಾಡಿದ್ದೀರಿ.

(ಗೊಂದಲ)

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಅಧ್ಯಕ್ಷರೇ, ನನಗೆ ಅವಕಾಶ ಕೊಡಿ....

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ, ಇದು ಹೆಣ್ಣುಮಕ್ಕಳ ವಿಷಯ. ಮಾತನಾಡ ಲಿಕ್ಕೆ ಅವಕಾಶ ಕೊಡಬೇಕೆಂದು ಹೆಣ್ಣುಮಗಳೇ ಹೇಳಿದ್ದಾರೆ. ಪ್ರಶ್ನೆ ಕೇಳಿರುವವರು ಶ್ರೀಮತಿ ಲೀಲಾ ವತಿ ಆರ್. ಪ್ರಸಾದ್‌ರವರು ಒಬ್ಬ ಹೆಣ್ಣುಮಗಳೇ ಹೊರತು ಗಂಡುಮಗಳಲ್ಲ. ಪ್ರಶ್ನೆ ಕೇಳಿದವರು ಹೆಣ್ಣುಮಗಳು....

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಶ್ರೀಮತಿ ಲೀಲಾವತಿ ಪ್ರಸಾದ್‌ರವರು ಹೆಣ್ಣುಮಗಳು ಎಂದು ಹೇಳುವುದಕ್ಕೆ ನಾರಾಯಣ ಕುಮಾರ್ ಅವರ ಸರ್ಟಿಫಿಕೇಟ್ ಬೇಕಾಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಶ್ರೀಮತಿ ನಾಗರತ್ನಮ್ಮನವರು ಹಿರಿಯ ಸದಸ್ಯರು. ಪೇಪರ್ ನಲ್ಲಿ ಬರಲಿ ವಿಂದು ಅವರು ಹೇಳಬಾರದಾಗಿತ್ತು. ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಅವರು ಹಾಗೆ ಹೇಳಿಲ್ಲವೆಂದು ಹೇಳಿದ್ದಾರೆ. ಹಾಗೇನಾದರೂ ಹೇಳಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡಿಸುತ್ತೇನೆ.

**Expunged as ordered by the Chair.

1-30 p. m.

ಶ್ರೀ ಆರ್. ವೆಂಕಟರಾಮಯ್ಯ.—ಈ ವಿಷಯ ನಿನ್ನೆ ದಿವಸವೇ ಚರ್ಚೆಗೆ ಬರಬೇಕಾಗಿತ್ತು. ಆದರೆ ಇವೊತ್ತು ಬಂದಿದೆ. ಈ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ, ಎಲ್ಲರಿಗೂ ಈ ವಿಷಯದ ಮೇಲೆ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ನಾವು ಕೆಲವರು ಈ ವಿಷಯದ ಮೇಲೆ ಚರ್ಚೆ ಮಾಡುವ ಸಲುವಾಗಿ ನಿಯಮ 59ರ ಕೆಳಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಆದರೆ ಅದನ್ನು 72ನೇ ನಿಯಮದ ಪ್ರಕಾರ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದೀರಿ. ಆದರೆ ಈ ನಿಯಮದ ಪ್ರಕಾರ ನಾವು ಇಲ್ಲಿ ವ್ಯಾಪಕ ಚರ್ಚೆ ಮಾಡಲು ಬರುವುದಿಲ್ಲ. ಆದ್ದರಿಂದ ಗಮನ ಸೆಳೆಯುವ ಸೂಚನೆಗೆ ಬದಲು ನಿಲುವಳಿ ಸೂಚನೆ ಮೇಲೆ ಇದನ್ನು ಚರ್ಚೆಗೆ ತೆಗೆದುಕೊಂಡರೆ ಎಲ್ಲರೂ ಮಾತನಾಡಲು ಅವಕಾಶ ವಾಗುತ್ತದೆ.

ಶ್ರೀ ಕೆ. ಬಿ. ಶ್ಯಾನಪ್ಪ.—ನಮಗೂ ಸಹ ಇದರ ಮೇಲೆ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಒಬ್ಬರು ಮಾತನಾಡುತ್ತಿರುವಾಗಲೇ ಮತ್ತೊಬ್ಬರು ಎದ್ದು ನಿಂತು ಮಾತನಾಡು ವುದು ನಿಯಮದ ಪ್ರಕಾರ ಸರಿಯಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ,

ಶ್ರೀ ಧರ್ಮಸಿಂಗ್.—ಗಮನ ಸೆಳೆಯುವ ಸೂಚನೆಯ ವ್ಯಾಪ್ತಿ ಬಹಳ ಕಡಿಮೆ. ಈ ಕಾರಣ ದಿಂದ ನಿಲುವಳಿ ಸೂಚನೆಯ ಮೇರೆಗೆ ಎಲ್ಲರಿಗೂ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಇದೊಂದು ಬಹಳ ಗಂಭೀರವಾದ ವಿಚಾರ. ಆದ್ದರಿಂದ ಇದು ಸರಿಯಾದ ರೀತಿಯಲ್ಲಿ ಇಲ್ಲಿ ಚರ್ಚೆಯಾಗಬೇಕಾಗುತ್ತದೆಂದು ಎಲ್ಲರೂ ತಿಳಿಸಿದ್ದಾರೆ. ಗಮನ ಸೆಳೆಯುವ ಸೂಚನೆ ಮಂಡಿಸಲು ತಾವು ಒಬ್ಬರು ಸದಸ್ಯರಿಗೆ ಅವಕಾಶ ಕೊಟ್ಟರೆ, ಅದರ ಮೇಲೆ ಎಲ್ಲರೂ ಮಾತನಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಇದಕ್ಕೆ ಅವಕಾಶ ಕೇಳಿರುವಂತಹ ಈ ಸದನದ ಎಲ್ಲಾ ಸದಸ್ಯರ ಹಕ್ಕಿಗೆ ಚ್ಯುತಿ ಬರಬಾರದು. ಆದ್ದರಿಂದ ಯಾವರೀತಿ ಇದು ಚರ್ಚೆಯಾಗಬೇಕು ಎಂಬ ಬಗ್ಗೆ ತಾವೇ ಸಲಹೆ ಕೊಡಿ. ಇವೊತ್ತು ಒಂದು ನಿಯಮದ ಪ್ರಕಾರ ಚರ್ಚೆಮಾಡಿ ನಾಳೆ ಮತ್ತೆ ಇನ್ನೊಂದು ನಿಯಮದ ಕೆಳಗೆ ಚರ್ಚೆ ಮಾಡುವುದು ಸರಿಯಲ್ಲ. ಹಸಿವು ಬಂದಾಗ ಕಾಫಿ ಕುಡಿದು ನಂತರ ಊಟ ಮಾಡುವುದಕ್ಕೆ ಹೋದರೆ ಅದು ಸರಿಯಾದ ಊಟ ಆಗುವುದಿಲ್ಲ. ಹಸಿವು ಕೆಟ್ಟು ಹೋಗುತ್ತದೆ ಕಾಲು ಕೆ.ಬಿ. ಅರ್ಧ ಕೆ.ಜಿ.ಯಂತೆ ಅಕ್ಕಿ ಹಾಕಿ ಅನ್ನ ಮಾಡುವುದಕ್ಕೆ ಬದಲು ಒಂದೇ ಸಲ ಒಂದು ಕೆ.ಜಿ. ಅಕ್ಕಿ ಹಾಕಿ ಅನ್ನ ಮಾಡುವುದು ಯಾವರೀತಿ ಒಳ್ಳೆಯದೋ ಅದೇರೀತಿ ಇದನ್ನು ಬೇರೆ ಬೇರೆ ನಿಯಮ ಗಳ ಕೆಳಗೆ ಪದೇ ಪದೇ ಚರ್ಚೆ ಮಾಡುವುದಕ್ಕೆ ಬದಲು ಒಂದೇ ನಿಯಮದ ಕೆಳಗೆ ವಿವರವಾಗಿ ಚರ್ಚೆ ಮಾಡುವುದು ಒಳ್ಳೆಯದು. ಇದು ವಿವರವಾಗಿ ಚರ್ಚೆಮಾಡಲು ಯೋಗ್ಯವಾದ ವಿಚಾರ ಎಂದು ನಾವು ನಿಲುವಳಿ ಸೂಚನೆ ಕೊಟ್ಟಿದ್ದೇವೆ. ಆದ್ದರಿಂದ ತಾವು ತಮ್ಮ ಅಧಿಕಾರವನ್ನು ಚಲಾವಣೆ ಮಾಡಿ ಚರ್ಚೆ ಮಾಡಲು ನಮಗೆ ಅವಕಾಶ ಮಾಡಿಕೊಡಬೇಕು ಮತ್ತು ಸರ್ಕಾರಕ್ಕೂ ತಾವು ಈ ಬಗ್ಗೆ ಸೂಕ್ತ ಸಲಹೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಇಡು ಅತ್ಯಂತ ಗಂಭೀರವಾದ ವಿಚಾರ. ನಾವು ಧರ್ಮವನ್ನು ಎತ್ತಿಹಿಡಿಯಬೇಕಾಗುತ್ತದೆ. ಇಂತಹ ಒಂದು ಅಮಾನುಷವಾದ ಘಟನೆ ನಡೆದುಹೋಗಿದೆ. ಧರ್ಮದ ಹೆಸರಿನಲ್ಲಿ ಇಂತಹ ಅಧರ್ಮಗಳು ನಡೆಯಬಾರದು. ಈ ಒಂದು ಘಟನೆಯ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ತಮ್ಮ ತಮ್ಮ ಭಾವನೆಗಳನ್ನು ತಿಳಿಸಲು ತಾವು ಅವಕಾಶ ಮಾಡಿಕೊಡಬೇಕು. ಗಂಭೀರವಾದ ಚರ್ಚೆ ಇಲ್ಲಿ ಆಗಬೇಕು. ಆದ್ದರಿಂದ ಗಮನ ಸೆಳೆಯುವ ಸೂಚನೆಗೆ ಬದಲು ಇದನ್ನು ನಿಲುವಳಿ ಸೂಚನೆಗೆ ಪರಿವರ್ತನೆ ಮಾಡಿ ಎಲ್ಲರೂ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನನಗೆ ತಾವು ಮಾತನಾಡಲು ಒಂದು ನಿಮಿಷ ಅವ ಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಶ್ರೀ ಶ್ಯಾನಪ್ಪನವರು ಏನು ಸಲಹೆ ಕೊಡುತ್ತಾರೋ ನೋಡೋಣ, ತಾವು ಕುಳಿತುಕೊಳ್ಳಿ.

ಶ್ರೀ ಕೆ. ಬಿ. ಶ್ಯಾನಪ್ಪ.—ಈ ಘಟನೆ ನಡೆದ ಭಾಗದಿಂದ ನಾನು ಬಂದಿದ್ದೇನೆ. ವಿಷಯ ಬಹಳ ಗಂಭೀರವಾದುದು. ಈ ಘಟನೆಯ ಬಗ್ಗೆ ಯಾರು ಯಾರು ವರದಿ ಮಾಡುತ್ತಿದ್ದಾರೆ ಮತ್ತು

ಯಾವ ಯಾವ ಸಂಘ ಸಂಸ್ಥೆಗಳು ಈ ಘಟನೆ ನಡೆದಿದ್ದು ಸರಿಯಲ್ಲವೆಂದು ಹೇಳುತ್ತಿವೆ ಅಂತಹವರಿಗೆಲ್ಲಾ ಬೆದರಿಕೆ ಪತ್ರಗಳು ಬರುತ್ತಿವೆ. ಇಂತಹ ಕೆಲವು ಪತ್ರಗಳನ್ನು ತಮಗೂ ಕಳುಹಿಸಿಕೊಟ್ಟಿದ್ದೇವೆ. ಈ ವಿಷಯ ಪ್ರಸ್ತಾಪ ಮಾಡಿದರೆ ತಲೆ ಕಡಿದುಹಾಕುತ್ತೇವೆಂದು ಕೆಲವರು ಬೆದರಿಕೆ ಪತ್ರಗಳನ್ನು ಬರೆಯುತ್ತಿದ್ದಾರೆ. ಆದ್ದರಿಂದ ಇದೊಂದು ಗಹನವಾದ ವಿಷಯವಾಗಿದೆ. ಇದರ ಮೇಲೆ ಎಲ್ಲರೂ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಇದರ ಮೇಲೆ ಎಲ್ಲರೂ ಮಾತನಾಡಬೇಕೆಂದು ಒತ್ತಾಯ ಮಾಡುತ್ತಿರುವ ಕಾರಣದಿಂದ ತಾವು ತಮಗೆ ಬಂದಿರುವ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡಲು ಅವಕಾಶ ಕೊಡುವುದಾದರೆ, ಅದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಅದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ನಾವು ಇದು ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆಯಾಗಬೇಕೆಂದು ಕೇಳಿದ್ದೆವು. ಅದಕ್ಕೆ ಮಾನ್ಯ ಮಂತ್ರಿಗಳು ಈಗ ಒಪ್ಪಿಕೊಂಡಿದ್ದಾರೆ. ಆದ್ದರಿಂದ ತಾವು ಬೇಡ ಎಂದು ಹೇಳುವುದು ಸರಿಯಲ್ಲ. ತಾವೂ ಸಹ ಒಪ್ಪಿಕೊಳ್ಳಬೇಕು.

ಅಧ್ಯಕ್ಷರು.—ನಾನು ಒಪ್ಪಿಗೆ ಕೊಟ್ಟರೆ ಆಗಬಹುದೆಂದು ಹೇಳಿದ್ದಾರೆ. ಆದರೆ ನಾನು ಇನ್ನೂ ಒಪ್ಪಿಗೆ ಕೊಟ್ಟಿಲ್ಲ.

ಶ್ರೀ ಕೆ. ಎಚ್. ಪಾಟೀಲ್ —ಈ ಸಭೆಯಲ್ಲಿ ಯಾವುದೇ ಚರ್ಚೆ ನಡೆಯಬೇಕಾದರೂ ತಮ್ಮ ಒಪ್ಪಿಗೆ ಬೇಕಾಗುತ್ತದೆ. ಈ ಮಾತನ್ನು ನಿನ್ನೆ ಕೂಡ ಹೇಳಿದ್ದೇನೆ. ಇದು ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ವಿಷಯವಾದ ಕಾರಣ ನಿಲುವಳಿ ಸೂಚನೆ ರೂಪದಲ್ಲಿ ಇದನ್ನು ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆ.

ಅಧ್ಯಕ್ಷರು.—ಸಾರ್ವಜನಿಕವಾದಂಥ ಮಹತ್ವದ ವಿಚಾರಗಳನ್ನು ಗಮನ ಸೆಳೆಯುವ ಸೂಚನೆಗಳ ಮೂಲಕವಾಗಿಯಾಗಲೀ ಇಲ್ಲವೇ ಅಲ್ಪ ಕಾಲಾವಧಿ ಚರ್ಚೆ ನಡೆಸುವ ಮೂಲಕವಾಗಿಯಾಗಲೀ ಇಲ್ಲಿ ತರಲು ಅವಕಾಶವಿದೆ.

ಶ್ರೀ ಕೆ. ಎಚ್. ಪಾಟೀಲ್.—ನಾವು ನಿಲುವಳಿ ಸೂಚನೆಯನ್ನು ಕೊಟ್ಟಮೇಲೆ ಅದು ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ವಿಷಯವೋ ಅಥವಾ ಅಲ್ಲವೋ ಎಂಬುದನ್ನು ತಾವು ನೋಡಬೇಕಾಗುತ್ತದೆ. ಒಂದು ವಿಷಯದ ಮೇಲೆ ನಿಲುವಳಿ ಸೂಚನೆ ಕೊಟ್ಟಿರುವಾಗ ಅದೇ ವಿಷಯವನ್ನು ಗಮನ ಸೆಳೆಯುವ ಸೂಚನೆಯ ಮೂಲಕ ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡುವುದು ಸರಿಯೇ ಎಂಬುದೇ ಇಲ್ಲಿರುವ ಪ್ರಶ್ನೆ.

ಅಧ್ಯಕ್ಷರು.—ಈಗಾಗಲೇ ನಾನು ಗಮನ ಸೆಳೆಯುವ ಸೂಚನೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಆದ್ದರಿಂದ I have withheld my consent for the adjournment motion. ಈ ವಿಷಯವನ್ನು ನಿಯಮ 68ರ ಪ್ರಕಾರ ಬೇಕಾದರೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಕೆ. ಎಚ್. ಪಾಟೀಲ್.—ನಾವು ನಿಲುವಳಿ ಸೂಚನೆ ಮೇಲೆ ಇದು ಚರ್ಚೆಯಾಗಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ನೋಡೋಣ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಒಂದು ಘಟನೆ ಅತ್ಯಂತ ಖಂಡನೀಯವಾದುದು. ಇಂತಹ ಒಂದು ಘಟನೆ ನಡೆದುಹೋಗಿದೆ. ಆದರೆ ಇದು ನಿನ್ನೆ ಮೊನ್ನೆ ನಡೆದಂಥ ಘಟನೆಯಲ್ಲ.

ಅಧ್ಯಕ್ಷರು.—ಅದಕ್ಕಾಗಿಯೇ ನಾನು ಗಮನ ಸೆಳೆಯುವ ಸೂಚನೆ ಮೂಲಕ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ರಾವಕೃಷ್ಣ ಹೆಗಡೆ.—ನಿಜವಾಗಿ ನೋಡಿದರೆ ಇದರ ಮೇಲೆ ನಿಲುವಳಿ ಸೂಚನೆಯನ್ನು ತರುವುದಕ್ಕೆ ಬರುವುದಿಲ್ಲ.

Sri S. Bangarappa.—I am sorry. I take very strong exception for this....

ಶ್ರೀ ರಾಮಕೃಷ್ಣ ಹೆಗಡೆ.—ದಯಮಾಡಿ ತಾವು ನಿಯಮಗಳನ್ನು ಓದಬೇಕು. ಇಷ್ಟರವರೆಗೆ ಇಲ್ಲಿ ಅನಾವಶ್ಯಕವಾಗಿ ಸಮಯ ಹೋಯಿತು.

(INTERRUPTIONS)

ಶ್ರೀ ರಾಮಕೃಷ್ಣ ಹೆಗಡೆ.--ಇದರ ಬಗ್ಗೆ....

(ಗೊಂದಲ)

ಅಧ್ಯಕ್ಷರು.--ಮಾನ್ಯ ಬಂಗಾರಪ್ಪನವರೇ, ಸಭಾ ನಾಯಕರು ಮಾತನ್ನಾಡುವುದಕ್ಕೆ ಅಧಿಕಾರ ಇದೆ, ತಾವು ಸ್ವಲ್ಪ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ, ಸಭಾ ನಾಯಕರ ಅಭಿಪ್ರಾಯವನ್ನು ಕೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅನಾವಶ್ಯಕ ವಿಷಯಗಳ ಮೇಲೆ ಸುಮ್ಮನೆ ಸಮಯವನ್ನು ಹಾಳು ಮಾಡಬಾರದು,

(ಗೊಂದಲ)

ಅಧ್ಯಕ್ಷರು.—ಸಭಾ ನಾಯಕರು ಮಾತನಾಡುವಾಗ ಈ ರೀತಿ ಎದ್ದೆದ್ದು ಗಲಾಟೆ ಮಾಡಬಾರದು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನನ್ನ ಅಭಿಪ್ರಾಯದ ಪ್ರಕಾರ ಈ ವಿಷಯವನ್ನು ನಿಯಮ 68ರ ಪ್ರಕಾರ ಡಿಸ್‌ಕಷನ್‌ಗೆ ತೆಗೆದುಕೊಳ್ಳಿ, ನಿಲುವಳಿ ಸೂಚನೆ ಬೇಡ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಕುದುರೆ ಮೋತಿ ಪ್ರಕರಣದ ಮೇಲೆ ನಿಲುವಳಿ ಸೂಚನೆಯನ್ನು ತರಲು ನಾವೆಲ್ಲರೂ ಸಹಿ ನೋಟೀಸನ್ನು ಕೊಟ್ಟಿದ್ದೇವೆ, ತಾವು ನಿಲುವಳಿ ಸೂಚನೆಗೆ ಕನ್‌ಸೆಂಟ್ ಕೊಡತಕ್ಕ ವಿಚಾರದಲ್ಲಿ ವಿತ್‌ಹೆಲ್ಡ್ ಮಾಡಿದ್ದೀರಿ. ಹಿಂದೆ ಎಷ್ಟೋ ಬಾರಿ ನಿಲುವಳಿ ಸೂಚನೆಗೆ ಒತ್ತಡ ಮಾಡಿ ನಿಲುವಳಿ ಸೂಚನೆಯನ್ನು ತಂದಿದ್ದೇವೆ ತಾವು ಬೇಕಾದರೆ ಹಿಂದಿನ ರೆಕಾರ್ಡುಗಳನ್ನು ನೋಡಿ. ಆದುದರಿಂದ ತಾವು ದಯವಿಟ್ಟು ತಮ್ಮ ನಿಲುವನ್ನು ರಿವೈಸ್ ಮಾಡಿ ನಿಲುವಳಿ ಸೂಚನೆಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೇಳಿದ್ದನ್ನು ಒಪ್ಪಿಕೊಂಡರೂ ಪುನಃ ಏತಕ್ಕೆ ವಿಷಯವನ್ನು ಎತ್ತುತ್ತಾರೆ ?

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ, ಸಭಾ ನಾಯಕರು ನಾನು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ನಮಗೆ ಇದೊಂದೇ ಕೆಲಸ ಅಲ್ಲ. ಇವರ ರಾಗ ಯಾವಾಗಲೂ ಇದ್ದದ್ದೇ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಹಳೆ ರಾಗ ಕೇಳುವುದಕ್ಕೆ ನಾವು ಇಲ್ಲಿ ಬಂದಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಕನ್ನಡದಲ್ಲಿ ಬಯ್ಯುವುದು ಸಾಲದೇ ಈಗ ಇಂಗ್ಲೀಷ್‌ನಲ್ಲಿ ಬೇರೆ ಬಯ್ಯುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನನಗೆ ಕನ್ನಡದಲ್ಲೂ ಬಯ್ಯುವುದಕ್ಕೆ ಚೆನ್ನಾಗಿ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆಯ ದಿವಸ ಬರಗಾಲದ ಬಗ್ಗೆ ಮಾತನಾಡಲು ಸಮಯವನ್ನು ವಿನಿಯೋಗಿಸಿದರೆ ಅದಕ್ಕೆ ನಮ್ಮ ಸಮ್ಮತಿಯೂ ಇತ್ತು. ಇವೊತ್ತು ಈ ಪ್ರಕರಣದ ಮೇಲೆ ನಿಲುವಳಿ ಸೂಚನೆಯನ್ನು ತರಲು ತಾವು ನಮಗೆ ಅವಕಾಶವನ್ನು ಕೊಡಬೇಕು ಇದರಿಂದ ವಿಷಯದ ಮೇಲೆ ಚರ್ಚೆ ಮಾಡಲು ಅವಕಾಶವಾಗುತ್ತದೆ.

ಅಧ್ಯಕ್ಷರು.—ಈ ವಿಷಯದ ಮೇಲಿನ ಚರ್ಚೆಗೆ ನಿಯಮ 68ರಲ್ಲಿ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನಿಮಗೆ ಮಾತನಾಡಲು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ತಾವು ಸಮಯವನ್ನು ಸಕಾಲಯೋಗಪಡಿಸಿಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನನಗೆ ಒಂದು ಸಂಶಯ ಇದೆ, ಅದನ್ನು ತಾವು ನಿವಾರಣೆ ಮಾಡಬೇಕು. ಕುದುರಮೋತಿ ಪ್ರಕರಣದ ಬಗ್ಗೆ ನಿಲುವಳಿ ಸೂಚನೆಯನ್ನು ತರಲು ಮಾನ್ಯ ಸದಸ್ಯರನೇಕರು ಪ್ರಸ್ತಾಪ ಮಾಡಿದ್ದಾರೆ, ತೆಲುಗು-ಗಂಗಾ ಪ್ರಕರಣದ ಬಗ್ಗೆಯು ಪ್ರಸ್ತಾಪ ಮಾಡಿದ್ದಾರೆ, ನಾನೂ ಸಹ ನಿಲುವಳಿ ಸೂಚನೆಗೆ ಕೋರಿದ್ದೇನೆ. ಮುಖ್ಯಮಂತ್ರಿಗಳು ಇದನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳುವುದು ಬೇಡ ಎಂದು ಹೇಳುತ್ತಿದ್ದಾರೆ ಇದು ಸರಿಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೃಷ್ಣನ್‌ರವರಿಗೆ ಹೇಳುವುದಿಷ್ಟೇ, ಈ ಪ್ರಕರಣದಲ್ಲಿ ಕೇಸನ್ನು ಹಾಕಲಾಗಿದೆ, ಈಗಾಗಲೇ ಎಫ್.ಐ.ಆರ್.ನ್ನು ಸಹ ಹಾಕಿದ್ದಾರೆ, ಕೇಸ್ ರೆಜಿಸ್ಟರ್ ಆಗಿದೆ, ಆದುರಿಂದ ಈ ವಿಚಾರದ ಮೇಲೆ ನಿಲುವಳಿ ಸೂಚನೆ ತಂದು ಚರ್ಚೆ ಮಾಡುವುದು ಸರಿಯಲ್ಲ. ಚರ್ಚೆಗೂ ಒಂದು ಮಿತಿ ಇದೆ ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಯಾವ ವಿಷಯಕ್ಕೆ ಎಷ್ಟು ಮಹತ್ವ ಕೊಡಬೇಕೋ ಅಷ್ಟನ್ನು ಕೊಡಬೇಕೇ ಹೊರತು ಅದನ್ನು ಮೀರಿ ಹೋಗುವಂತಿಲ್ಲ ಎಂದು ಮಾನ್ಯ ಕೃಷ್ಣನ್‌ರವರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ—ನಿಲುವಳಿ ಸೂಚನೆಗೆ ಮಾನ್ಯ ಮಂತ್ರಿಗಳು ಒಪ್ಪಿಕೊಂಡರೂ, ಪ್ರಜಾಪ್ರಭುತ್ವದ ಸತ್‌ಸಂಪ್ರದಾಯದ ಪ್ರಕಾರ ಅಧ್ಯಕ್ಷರವರು ಒಪ್ಪಿಕೊಳ್ಳಬೇಕು, ಆಮೇಲೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಇಲ್ಲಿ ಸ್ವಲ್ಪ ಕೇಳಿ, ನಿಲುವಳಿ ಸೂಚನೆಗೆ ಬದಲಾಗಿ ಕಾಲಿಂಗ್ ಅಟೆನ್‌ಷನ್ ರೂಪದಲ್ಲಾಗಲೀ ಅಥವಾ ನಿಯಮ 68ರ ಪ್ರಕಾರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಕಾಲಿಂಗ್ ಅಟೆನ್‌ಷನ್ ರೂಪದಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುಹು ಬೇಡ. ನಿಲುವಳಿ ಸೂಚನೆ ಪ್ರಕಾರವಾಗಿಯೇ ಈ ವಿಷಯ ಚರ್ಚೆಗೆ ಬರಲಿ....

ಶ್ರೀಮತಿ ಲೀಲಾದೇವಿ ಪ್ರಸಾದ್.—ನನಗೂ ಮಾತನಾಡುವುದಕ್ಕೆ ಅವಕಾಶಕೊಡಿ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೇ ನಮ್ಮ ಗಮನ ಸೆಳೆಯುವ ಸೂಚನೆಗೆ ತಾವು ಅವಕಾಶ ಮಾಡಿಕೊಡಬೇಕು.

ಗೊಂದಲ—(ಹಲವಾರು ಮಾನ್ಯ ಸದಸ್ಯರುಗಳು ಒಟ್ಟಾಗಿ ಮಾತನಾಡಿದರು)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಮ್ಮ ಗಮನ ಸೆಳೆಯುವ ಸೂಚನೆ ಸದನದ ಮುಂದೆ ಮೂರು ದಿನಗಳ ಹಿಂದೆಯೇ ಹೋಗಿದೆ. ಆದರೆ, ವಿರೋಧ ಪಕ್ಷದ ನಾಯಕರು ಈ ದಿನ ತಂದಿದ್ದಾರೆ. ಆದುದರಿಂದ ದಯವಿಟ್ಟು ಯಾರಿಗೆ ಮೊದಲು ಪ್ರಾತಿನಿಧ್ಯ ಕೊಡಬೇಕೆಂದು ತಾವುಗಳು ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನಾನು ಇದರ ಬಗ್ಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ಬಿ. ಕೆ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ನೀವು ರೂಲಿಂಗ್ ಕೊಟ್ಟ ಮೇಲೆ ನಾವು ಮಾತನಾಡಲಿಕ್ಕೆ ಅವಕಾಶ ಆಗುವುದಿಲ್ಲ. ದಯವಿಟ್ಟು ರೂಲಿಂಗ್ ಕೊಡುವುದಕ್ಕೆ ಮುಂಚಿತವಾಗಿ ಮಾತನಾಡುವುದಕ್ಕೆ ನಮಗೆ ಅವಕಾಶ ಕೊಡಿ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಗಮನ ಸೆಳೆಯುವ ಸೂಚನೆ ಮತ್ತು ನಿಲುವಳಿ ಸೂಚನೆ ಎರಡನ್ನು 68ನೇ ನಿಯಮದ ಪ್ರಕಾರ ತೆಗೆದುಕೊಳ್ಳೋಣ. ತಾವು ಬೇಡ ಎಂದು ಹೇಳ ಬೇಡಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಭಾ ನಾಯಕರು ಒಂದು ಅಭಿಪ್ರಾಯವನ್ನು ನಾವು ಈಗ ಕೇಳೋಣ. ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳಿ, ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ ಅಭಿಪ್ರಾಯಕ್ಕೆ ಬರೋಣ. ಆಮೇಲೆ ನಾನು ಡಿಸೈಡ್ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಸಭಾ ನಾಯಕರು ಯಾರು ಎಂದುಗೊತ್ತಾಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡರು.—ಸಭಾ ನಾಯಕರು ಮಾನ್ಯ ರಾಮಕೃಷ್ಣ ಹೆಗ್ಗಡೆಯವರು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸಭಾಧ್ಯಕ್ಷರೇ, ನಿನ್ನೆ ವಿರೋಧ ಪಕ್ಷದ ನಾಯಕರು ಮತ್ತಿತರ ಮಾನ್ಯ ಸದಸ್ಯರುಗಳು, ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಒದಗಿದೆ ಅದರ ಬಗ್ಗೆ ಮಾತನಾಡಲು ನಮಗೆ ಪ್ರಥಮ ಪ್ರಾತಸ್ತ್ಯ ಕೊಟ್ಟು ಚರ್ಚೆ ಮಾಡಬೇಕೆಂದು ಹೇಳಿದರು. ಇದರ ಬಗ್ಗೆ ಮಾನ್ಯ ಸದಸ್ಯರು

ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಬೇಕಾಗಿತ್ತು. ಅಭಾವ ಪರಿಸ್ಥಿತಿಯ ಬಗ್ಗೆ ಇರುವ ಅವಶ್ಯಕತೆಯನ್ನು ಮನಗಂಡು ಬಜೆಟ್ ಮೇಲಿನ ಚರ್ಚೆಯನ್ನು ಮುಂದೂಡಿ ತತ್‌ಕ್ಷಣ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಆದರೆ ಇವೊತ್ತು ಬೇರೆ ಒಂದು ಪ್ರಶ್ನೆ ಬಂತು. ಇದರ ಅರ್ಥ ಏನೆಂದರೆ, ನಿನ್ನೆ ಅಭಾವ ಪರಿಸ್ಥಿತಿ ಬಗ್ಗೆ ಏನು ಭಾವನೆ ವ್ಯಕ್ತ ಮಾಡಿದರು, ಅದು ಈಗ ತೀವ್ರ ಆಗಿಲ್ಲ ವೆಂದು ನಮಗೆ ಸಂಶಯ ಬಂತು. ಇಲ್ಲದಿದ್ದರೆ ನಿನ್ನೆ ಮತ್ತು ಇವೊತ್ತಿನ ಮಧ್ಯೆಯಲ್ಲಿ ಕುದುರೆಮೊತೆ ಘಟನೆ ಆಗಿದ್ದರೆ ನಾನು ಒಪ್ಪುತ್ತಿದ್ದೆ. ಆ ಘಟನೆ ಆಗಿ ಬಹಳ ದಿವಸಗಳು ಆಯಿತು. ಘಟನೆ ನಡೆದು, ಸರಕಾರ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರಕಾರದವರು ತೆಗೆದುಕೊಂಡಿದ್ದಾರೆ. ನಾನು ಚರ್ಚೆ ಮಾಡಬೇಕಾಗಿಲ್ಲ ಎಂದು ಹೇಳುವುದಿಲ್ಲ. ಕಾಲಿಂಗ್ ಅಟೆನ್‌ಷನ್ ಕೊಡಿ ಎಂದು ಹೇಳಿಲಿಕ್ಕೆ ಇಷ್ಟೆಲ್ಲಾ ಹೊತ್ತು ಕಳೆಯುವುದರ ಬದಲು ಅಧ್ಯಕ್ಷರೇ, ಆಡ್‌ಮಿಟ್ ಮಾಡಿದ್ದರೆ, ಅದು ಮುಗಿದು ಹೋಗುತ್ತಿತ್ತು.

(ಗೊಂದಲ)

ಮಾನ್ಯ ವಿರೋಧಪಕ್ಷದ ನಾಯಕರು ಮಾಡಿದ ಆಗ್ರಹ ಏನು ಅಂದರೆ, ಇದನ್ನು ನಿಲುವಳಿ ಸೂಚನೆ ಯಾಗಿ ತೆಗೆದುಕೊಳ್ಳಿ ಎಂದು.

ಶ್ರೀ ಧರ್ಮಸಿಂಗ್.—ಈ ವಿಷಯವನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕೆಂದು ನಾವು ಕೇಳಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ನೀವೂ ಒಪ್ಪಿದ್ದೀರಿ, ನಾವೂ ಹೇಳಿದ್ದೇವೆ. ಅದಕ್ಕಾಗಿ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಒಪ್ಪಿಗೆ ಕೊಡಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಭಾನಾಯಕರು ಮಾತನಾಡುತ್ತಿದ್ದಾರೆ, ದಯವಿಟ್ಟು ಗೊಂದಲ ಮಾಡ ಬೇಡಿ, ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಯಾವುದರ ಮೇಲೆ ಪಾಯಿಂಟ್ ಆಫ್ ಆರ್ಡರ್ ಇದೆ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು ಹೇಳಿದ ವಿಷಯ ವನ್ನು ನಾವೇನೂ ಲಘುವಾಗಿ ಪರಿಗಣಿಸುವುದಿಲ್ಲ. ಅವರಿಗೆ ಸಭೆಯನ್ನು ಹೇಗೆ ನಡೆಸಬೇಕೆಂಬ ಬಗ್ಗೆ ಜೆನ್ನಾಗಿ ಗೊತ್ತಿದೆ. ಸದಸ್ಯರ ಬಗ್ಗೆ ಅವರು ಹೀಗೆ ಮಾತನಾಡುವಾಗ ಅನಾವಶ್ಯಕ ಕಾಲಹರಣ ಮಾಡುತ್ತಿದ್ದಾರೆ ಎಂಬ ಭಾವನೆಯಿಂದ ಮಾತನಾಡಿದ್ದಾರೆ. ರೂಲ್ ನಂಬರ್ 310ರ ಪ್ರಕಾರ ಸದಸ್ಯರು ಸದನವನ್ನುದ್ದೇಶಿಸಿ ಮಾತನಾಡಬೇಕಾದರೆ ಒಂದು ನಿಯಮ ಇದೆ. ಅದು ಏನೆಂದರೆ, "ಸಂಸತ್ತು ಅಥವಾ ಯಾವುದೇ ರಾಜ್ಯ ವಿಧಾನ ಮಂಡಲಗಳ ವ್ಯವಹರಣೆಗಳು ಮತ್ತು ನಡವಳಿಕೆಗಳ ಕುರಿತು ಹೀನಾಯವಾಗಿ ಮಾತನಾಡತಕ್ಕುದಲ್ಲ"—ಈ ಸದನದಲ್ಲಿ ನಾವು ಅನಾವಶ್ಯಕವಾಗಿ ಕಾಲಹರಣ ಮಾಡುತ್ತಿದ್ದೇವೆಂದು ಹೇಳಿದರೆ, ಅದು ಸರಿಯಲ್ಲ. ಅದು ಸದನದ ಮೇಲೆ ರಿಫ್ಲೆಕ್ಷನ್ ಆಗುತ್ತದೆ. ಈ ಮಾತನ್ನು ಮತ್ತೆ ಸಭಾನಾಯಕರು ಆಡುವ ಹಾಗೆ ಕಾಣುತ್ತಿದೆ. ನಮಗೆ ಕಾಲಹರಣ ಮಾಡಬೇಕೆಂದೇನೂ ಇಲ್ಲ. ವಿಷಯ ನಿಲುವಳಿ ಸೂಚನೆಯಾಗಬೇಕೆಂದೂ ಇಲ್ಲ. ಇದರ ಬಗ್ಗೆ ಸರಿಯಾಗಿ ಚರ್ಚೆಯಾಗ ಬೇಕು. ವಿಷಯವನ್ನು ಇದೇ ರೀತಿಯಲ್ಲಿ ತೆಗೆದುಕೊಳ್ಳಬೇಕೆಂದು ನಮ್ಮ ಒತ್ತಾಯವಲ್ಲ, ಒಟ್ಟಿನಲ್ಲಿ ಸರಿಯಾದ ರೀತಿಯಲ್ಲಿ ಚರ್ಚೆ ಮಾಡಬೇಕೆಂಬುದು ನಮ್ಮ ವಾದ. ಅಂದಮೇಲೆ ತಾವುಗಳು ಅವಕಾಶ ಮಾಡಿ ಕೊಡಿ. ಸರಕಾರವನ್ನು ಯಾವುದೇ ಇಕ್ಕಟ್ಟಿನಲ್ಲಿ ಸಿಲುಕಿಸಬೇಕೆಂಬ ಪ್ರಯತ್ನ ನಮ್ಮದಲ್ಲ. ಸಭಾನಾಯಕರಿಗೆ ಇದರ ಬಗ್ಗೆ ಅವಕಾಶ ಮಾಡಿಕೊಡುವ ಜವಾಬ್ದಾರಿ ಇದೆ. ಆ ರೀತಿಯಲ್ಲಿ ಸಲಹೆ ಮಾಡ ಬೇಕಾಗಿತ್ತು.

ಅಧ್ಯಕ್ಷರು.—ಸಭಾನಾಯಕರು ಮಾತನಾಡುತ್ತಿದ್ದಾರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ನಾನು ಬಂದಮೇಲೆ, ಆದಕ್ಕೆ ಮೊದಲು ಯಾರು ಯಾರು ಈ ಕುರಿತು ಅಭಿಪ್ರಾಯ ವ್ಯಕ್ತ ಮಾಡಿದರು, ಅದನ್ನು ಕೇಳಿದ್ದೇನೆ. ನಾನು ಬಂದಮೇಲೆ, ಮಾನ್ಯ ಶ್ರೀ ಧರ್ಮಸಿಂಗ್‌ರವರು ಎರಡು ಸಲ ಹೇಳಿದರು, ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ತೆಗೆದುಕೊಳ್ಳಿ ಎಂದು. ಹಾಗೆಂದರೆ, ಇದು ಅಭಾವ ಪರಿಸ್ಥಿತಿಗಿಂತಲೂ ಮಹತ್ವದ್ದಾಗಿದೆಯೇ ?

(ಗೊಂದಲ)

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು.--ಸಭಾನಾಯಕರು ಹೇಳಿ ಮುಗಿಸಲಿ.

ಶ್ರೀ ರಾಮಕೃಷ್ಣ ಹೆಗಡೆ.--ಇದರಿಂದ ಏನು ಪ್ರಯೋಜನ ಆಗಬೇಕೋ ಇಲ್ಲವೋ ನಾವು ಹೇಳುವುದನ್ನು ನೀವು ಕೇಳಬೇಕು, ನೀವು ಹೇಳುವುದನ್ನು ನಾವು ಕೇಳಬೇಕು. ಎಲ್ಲರೂ ಒಮ್ಮೆಗೇ ಮಾತನಾಡಿದರೆ ಅದಕ್ಕೆ ಡಿಬೇಟ್ ಎಂದು ಹೇಳುತ್ತಾರೆಯೇ ? ಈಗ ಅಭಾವ ಪರಿಸ್ಥಿತಿಯ ಕುರಿತು ಅರ್ಧ ಚರ್ಚೆಯಾಗಿದೆ. ಇವ್ಮತ್ತು ಕೂಡಾ ಎರಡು ಗಂಟೆಗಳ ಕಾಲ ಇದರ ಬಗ್ಗೆ ಚರ್ಚೆಯಾಯಿತು. ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆ ಮುಂದುವರಿಸಬೇಕೋ ಬೇಡವೋ ? ಬರಗಾಲ ಪರಿಸ್ಥಿತಿಯ ಬಗ್ಗೆ ಅಷ್ಟು ಮಹತ್ವ ಇದ್ದರೆ, ಅವರನ್ನು ಮುಂದುವರಿಸುವುದು ಅಗತ್ಯವೆಂದು ಕಂಡರೆ ಅದನ್ನು ಮಾಡೋಣ. ನಿಲುವಳಿ ಸೂಚನೆಯನ್ನು ನಾಳೆ ತೆಗೆದುಕೊಳ್ಳೋಣ. ಆಜೆಂಡ ಪ್ರಕಾರ ಏನು ಇದೆ ಅದನ್ನು ಈಗ ತೆಗೆದುಕೊಳ್ಳಿ.

ಅಧ್ಯಕ್ಷರು.—ಈಗ ನಿಲುವಳಿ ಸೂಚನೆ ತೆಗೆದುಕೊಳ್ಳುವುದು ಬೇಡವೆಂದು ಮಾನ್ಯ ಸಭಾನಾಯಕರು ಹೇಳಿದರು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರುಗಳಿಗೆ ನಾನು ಏನೂ ಹೇಳಬೇಕಾದುದು ಇಲ್ಲ. ಇದರ ಬಗ್ಗೆ ಇಷ್ಟು ಹೊತ್ತು ಚರ್ಚೆ ಮಾಡಬೇಕಾದುದೂ ಅವಶ್ಯವಿರಲಿಲ್ಲ. ಈಗಲೇ ಇದನ್ನು ಸಂಪೂರ್ಣವಾಗಿ, ಸ್ಪೆಷಲ್ ಆಗಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನಾವು ಸದನದಲ್ಲಿ ಏನು ಚರ್ಚೆ ಮಾಡಬೇಕೆಂದು ಬಿಸಿನಸ್ ಅಡ್ವೈಸರಿ ಸಮಿತಿಯಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಆ ಸಮಿತಿಯು ಇರುವುದು ತೀರ್ಮಾನ ತೆಗೆದುಕೊಳ್ಳಲಿಕ್ಕೆ ಅದರಂತೆ ಮಾಡುತ್ತೇವೆ. ನನಗೆ ಸದಸ್ಯರ ತೀವ್ರ ಕಳಕಳಿಯೂ ಅರ್ಥವಾಗಿದೆ. ಎಷ್ಟೋ ಜನ ಮಾನ್ಯ ಸದಸ್ಯರು ತೆಲುಗು ಗಂಗಾ ಮತ್ತು ಕುದುರೇ ಮೋತಿ ಪ್ರಕರಣಗಳ ಬಗ್ಗೆ ಏನೋ ಹೇಳಬೇಕೆಂದು ಆತುರದಿಂದ ಇದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಅದಕ್ಕಾಗಿ ಅಗ್ರಹ ಪಡಿಸುತ್ತಿದ್ದಾರೆ. ಅದಕ್ಕೆ ಬೇರೆ ಸಮಯವನ್ನು ನಿಗದಿ ಮಾಡಿ ಚರ್ಚೆ ಮಾಡೋಣ. ಆದರ ಅಗತ್ಯವಿತ್ತೆ ? ನಾನು ಒಂದು ಮಾತನ್ನು ಹೇಳುತ್ತೇನೆ, ದಯಮಾಡಿ ಕೇಳಿ. ಚರ್ಚೆ ಮಾಡೋಣ. ನಾವು ಮಾಡಿದಂತಹ ಚರ್ಚೆ ಏನಾದರೂ ಸಾಧನೆ ಮಾಡುವಂತೆ ಇರಬೇಕು. ಅದು ಬಿಟ್ಟು ಮಕ್ಕಳು ಮಾಡತಕ್ಕಂಥ ಕೆಲಸವನ್ನು ಮಾಡಿದರೆ ಹೇಗೆ ? ನೀವು ಏನು ಹೇಳಿದ್ದೀರೋ ಅದನ್ನು ನಾವು ಕುಳಿತುಕೊಂಡು ಕೇಳಿದ್ದೇವೆ. ಅದೇ ರೀತಿಯಲ್ಲಿ ನಾವು ಹೇಳುವುದನ್ನು ಕೂಡ ದಯಮಾಡಿ ಕುಳಿತುಕೊಂಡು ಕೇಳಿ.

2-00 p.m.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳಿದರೂ ನಾವು ಸುಮ್ಮನೆ ಈ ಸದನದ ಸಮಯವನ್ನು ಕಾಲಹರಣ ಮಾಡುವುದು ಬೇಡವೆಂದು. ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯವೇ ನಮ್ಮ ಅಭಿಪ್ರಾಯ ಕೂಡ. ಆದರಲ್ಲಿ ಯಾವ ವ್ಯತ್ಯಾಸ ಕೂಡ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಥವಾ ಸರ್ಕಾರದ ಪರವಾಗಿ ಈ ಮಾತನ್ನು ಮೊದಲೇ ಹೇಳಿದ್ದರೆ ಇಷ್ಟು ಕಾಲಹರಣವಾಗುತ್ತಿರಲಿಲ್ಲ. ಒಂದೇ ದಿವಸದಲ್ಲಿ ಎರಡು ನಿಲುವಳಿ ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ನಮಗೂ ಕೂಡ ಗೊತ್ತಿದೆ. ಅದೂ ಅಲ್ಲದೆ ನಿವ್ಮೊತ್ತಿನ ದಿವಸ ರಾಜ್ಯದ ಬರಗಾಲ ಪರಿಸ್ಥಿತಿಯ ಬಗ್ಗೆ ನಾವು ನಿನ್ನೆಯಿಂದ ಚರ್ಚೆ ಮಾಡುತ್ತಾ ಬಂದಿದ್ದೇವೆ. ಆ ರೀತಿಯಿಂದ ಕೂಡ ಇವ್ಮೊತ್ತು ನಮ್ಮ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಆದರೂ ಕೂಡ ನಾವು ಸಭಾಧ್ಯಕ್ಷರನ್ನು ಒತ್ತಾಯ ಮಾಡಿ ನಿಯಮ 68ರ ಪ್ರಕಾರ ಕೂಡ ನಾವು ನೋಟೀಸ್ ಕೊಟ್ಟಿದ್ದೇವೆ. ಒಂದು ವೇಳೆ ಸಭಾಧ್ಯಕ್ಷರನ್ನು ನಾವು ಒತ್ತಾಯ ಮಾಡಿದ್ದರೆ ಈ ವಿಷಯವನ್ನು ಇವ್ಮೊತ್ತೆ ತೆಗೆದುಕೊಳ್ಳುವುದಕ್ಕೆ ಬರುತ್ತಿತ್ತು.

ಅಧ್ಯಕ್ಷರು.—ತಾವು ನನ್ನ ಕೊಠಡಿಗೆ ಬಂದು ಸಮಾಲೋಚನೆ ಮಾಡಿದ ಮೇಲೆ ತೆಗೆದುಕೊಳ್ಳಬಹುದಿತ್ತು.

ಶ್ರೀ ಎಸ್, ಬಂಗಾರಪ್ಪ.—ಆದರೆ ಮಾನ್ಯ ಸಭಾನಾಯಕರು ತಪ್ಪು ಅರ್ಥ ಕಲ್ಪನೆ ಬರುವಂತೆ ಉತ್ತರ ಕೊಟ್ಟಿದ್ದಾರೆ. ತೆಲುಗು-ಗಂಗಾ ಯೋಜನೆಯೇ ಆಗಲಿ ಅಥವಾ ಕುದುರೆಮೋತಿಯ ವಿಷಯವೇ ಆಗಲಿ ಎರಡೂ ವಿಷಯಗಳನ್ನು ಒಂದೇ ದಿವಸ ನಿಲುವಳಿ ಸೂಚನೆಯ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ....

ಅಧ್ಯಕ್ಷರು.—ಮಾನ್ಯ ಸಭಾ ನಾಯಕರು ಏನೋ ಹೇಳುತ್ತಾರೆ ಕೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಈಗ ಗಮನ ಸೆಳೆಯುವ ಸೂಚನೆಯ ನೋಟೀಸ್‌ನ್ನು ಅನೇಕ ಜನ ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಆ ಬಗ್ಗೆ ಆ ಕಡೆಯಿಂದ ಬಂದಂತಹ ಆಕ್ಷೇಪ ವೇನೆಂದರೆ ಯಾರು ಸೂಚನೆಗೆ ಸಹಿ ಮಾಡಿರುತ್ತಾರೋ ಅವರಿಗೆ ಮಾತ್ರ ಮಾತನಾಡಲು ಅವಕಾಶವಿದೆ

ಯೆಂದು ಮಾನ್ಯ ಸದಸ್ಯರಿಯಾದ ನಾಗರತ್ನಮ್ಮನವರು ಅಪ್ಪಣೆ ಕೊಡಿಸಿದರು. ಆದರೆ ಸಹಿ ಮಾಡದೆ ಇರುವವರು ಮಾತನಾಡುವುದಕ್ಕೆ ಆಗುವುದಿಲ್ಲವೇ ? ಆದ್ದರಿಂದ ನಾನು ಸೂಚನೆ ಮಾಡುತ್ತೇನೆ ಅವರಿಗೆ ಒಪ್ಪಿಗೆ ಇದ್ದರೆ ಈ ವಿಷಯವನ್ನು ಅಲ್ಪಕಾಲಾವಧಿ ಚರ್ಚೆಯನ್ನಾಗಿ ತೆಗೆದುಕೊಳ್ಳೋಣ. ಮತ್ತು ನಾಳೆ ಒಂದು ವಿಷಯವನ್ನು ಮತ್ತು ನಾಳೆದ್ದು ಒಂದು ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಎಸ್, ಬಂಗಾರಪ್ಪ.—ನಾವು ಸಹ ಅದನ್ನೆ ಒತ್ತಾಯ ಮಾಡುತ್ತಿದ್ದೆವು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಸಭಾ ನಾಯಕರು ಮೊದಲೇ ಈ ಮಾತನ್ನು ಹೇಳಿದ್ದರೆ 5 ನಿಮಿಷದಲ್ಲಿ ಇದೆಲ್ಲಾ ಮುಗಿಯುತ್ತಿತ್ತು. ಆದ್ದರಿಂದ ತಾವು ಕೂಡ ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು.

ಅಧ್ಯಕ್ಷರು —ಮಾನ್ಯ ಸದಸ್ಯರಾದ ಕೃಷ್ಣಾರೆಡ್ಡಿಯವರು ಬರಗಾಲ ಪರಿಸ್ಥಿತಿಯ ಬಗ್ಗೆ ನಿನ್ನೆ ಅರ್ಧಕ್ಕೆ ನಿಲ್ಲಿಸಿದ್ದ ಚರ್ಚೆಯನ್ನು ಮುಂದುವರಿಸಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಿಯಮ 334 ಏನಾಯಿತು ?

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ. ನನ್ನದೊಂದು ಕ್ರಿಯಾಲೋಪ ಇದೆ. ನಿಯಮ 334ರ ಪ್ರಕಾರ ನಾವು ಕಳುಹಿಸಿಕೊಟ್ಟಿದ್ದ ನೋಟೀಸ್‌ಗಳು ಏನಾದವು,

ಅಧ್ಯಕ್ಷರು.—ನಾನು ಆಗಲೇ ಹೇಳಿದ್ದೇನೆ. ನಿಯಮ 334ರ ನೋಟೀಸ್‌ಗಳನ್ನು ನಾಳೆ ತೆಗೆದು ಕೊಳ್ಳೋಣವೆಂದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಪ್ರೇಕ್ಷಕರ ಗ್ಯಾಲರಿಗೆ ಸಾರ್ವಜನಿಕರನ್ನು ಬಿಡುವ ವಿಚಾರವನ್ನು ಈಗಲಾದರೂ ಇತ್ಯರ್ಥ ಮಾಡಬಹುದಲ್ಲವೇ ? ಅಲ್ಲಿ ಬಾಂಬ್ ಇಟ್ಟಿಲ್ಲ ಯಾವುದೂ ಇಲ್ಲ. ಪ್ರೇಕ್ಷಕರ ಗ್ಯಾಲರಿಯಲ್ಲಿ ಸಾರ್ವಜನಿಕರು ಕುಳಿತುಕೊಂಡು ಸದನದ ಕಾರ್ಯಕಲಾಪ ಗಳನ್ನು ವೀಕ್ಷಣೆ ಮಾಡಲಿ. ಮತ್ತು ವಿಧಾನಸೌಧದ ಸುತ್ತಮುತ್ತಲು ಇರುವ ಪೋಲೀಸರನ್ನು ತೆಗೆ ಯಿರಿ. ಈ ಬಗ್ಗೆ ಮಾನ್ಯ ಗೃಹ ಸಚಿವರು ಏನಾದರೂ ಹೇಳಲಿ ?

ಶ್ರೀ ಬಿ. ರಾಚಯ್ಯ.—ಆ ತೀರ್ಮಾನ ಅಧ್ಯಕ್ಷರಿಗೆ ಬಿಟ್ಟಿದ್ದುದು.

ಅಧ್ಯಕ್ಷರು.—ತಾವು ದಯಮಾಡಿ ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ತಾವು ಪ್ರೇಕ್ಷಕರನ್ನು ಗ್ಯಾಲರಿಗಳಿಗೆ ಬಿಡುವ ಬಗ್ಗೆ ಇವೊತ್ತೆ ಒಂದು ತೀರ್ಮಾನ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು.—ನಾಳೆ ಹೇಳುತ್ತೇನೆ ಕುಳಿತುಕೊಳ್ಳಿ.

ವಿಷಯ : ರಾಜ್ಯದಲ್ಲಿರುವ ಬಡಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ.

*ಶ್ರೀ ಕೆ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ).—ಸನ್ಮಾನ್ಯ ಅಧ್ಯಕ್ಷರೇ ಇವೊತ್ತಿನ ದಿವಸ ಈ ಬರ ಗಾಲ ಪರಿಸ್ಥಿತಿಯಿಂದ ಹಳ್ಳಿಗಾಡಿನಲ್ಲಿರತಕ್ಕಂಥ ರೈತರ ಪರಿಸ್ಥಿತಿ ಯಾವ ರೀತಿಯಲ್ಲಿ ಇರುತ್ತದೆ ಎಂದು ನಿನ್ನೆಯ ದಿವಸ ನಾನು ಪ್ರಸ್ತಾಪ ಮಾಡುತ್ತಿದ್ದೆ. ಹಳ್ಳಿಗಾಡಿನಲ್ಲಿ ವಾಸ ಮಾಡತಕ್ಕಂಥ ರೈತ ಕೇವಲ ಕೆರೆ, ಬಾವಿಗಳನ್ನೇ ಅವಲಂಬಿಸಬೇಕಾಗಿದೆ. ಕೆರೆ ಮತ್ತು ಬಾವಿಗಳನ್ನು ನಂಬಿಕೊಂಡು ಇವೊತ್ತಿನ ದಿವಸ ರೈತ ತನ್ನ ಬೇಸಾಯವನ್ನು ಮಾಡಬೇಕಾಗಿದೆ. ಈ ಬಗ್ಗೆ ಮಾನ್ಯ ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು ಇಡೀ ಕರ್ನಾಟಕ ರಾಜ್ಯದ ಬರಗಾಲದ ಬಗ್ಗೆ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಾನು ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ಸದನದ ಒಂದು ಸಮಿತಿಯನ್ನು ನೇಮಕ ಮಾಡಿ ರಾಜ್ಯದ ಬರಗಾಲ ಪರಿಸ್ಥಿತಿಯನ್ನು ಸಿಂಹಾವಲೋಕನ ಮಾಡಬೇಕೆಂದು ಸಹ ನಾನು ಸಲಹೆ ಕೊಡುತ್ತೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದ್ದರೂ ಸಹ ಕೇಂದ್ರ ಸರ್ಕಾರದಿಂದ ಕೇವಲ 22 ಕೋಟಿ ರೂಪಾಯಿಗಳ ನೆರವು ಮಾತ್ರ ನಮಗೆ ಬಂದಿದೆ. ಆದ್ದರಿಂದ ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದು ಸಲಹೆ ಯನ್ನು ಮಾಡುತ್ತೇನೆ. ಅದೇನೆಂದರೆ ಕೇಂದ್ರ ಸರ್ಕಾರದಲ್ಲಿ ತಮ್ಮ ಪಕ್ಷದ ಸರ್ಕಾರವಿದೆ. ರಾಜ್ಯದಲ್ಲಿ ಇಷ್ಟು ಬರಗಾಲವಿದ್ದರೂ ಕೇಂದ್ರದಿಂದ ಬಂದಿರತಕ್ಕಂಥ ಹಣ ಸಾಕೇ ಎಂದು ಏತಕ್ಕೆ ಪ್ರಶ್ನೆ ಮಾಡಲಿಲ್ಲ? ಬೇರೆ ರಾಜ್ಯಗಳಿಗೆ ಈ ಮೊತ್ತವನ್ನು ಹೋಲಿಕೆ ಮಾಡಿ ನೋಡಿದರೆ ಬಹಳ ಕಡಿಮೆ ಹಣವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಮತ್ತು ಸದನದ ಸಮಿತಿಯನ್ನು ನೇಮಕ ಮಾಡಿ ಆ ಸಮಿತಿಗೆ ಮಾನ್ಯ ವಿರೋಧಪಕ್ಷದ ನಾಯಕರೇ ಮುಂದಾಳಾಗಿ ನಿಂತು ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ನೆರವು ಕೊಡಿಸಿಕೊಡುವಂತೆ ಒತ್ತಾಯ ಮಾಡಬೇಕು ಮತ್ತು ನಾನು ಕೆಲವೊಂದು ಅಂಕಿಅಂಶಗಳನ್ನು ಸಭೆಯ